# ನಾಣ್ಯಗಳ ವಿತರಣೆಗೆ ಆರ್‌ಬಿಐಯಿಂದ ಏಜೆನ್ಸಿಗಳ ನಿಯೋಜನೆ
## ಆಗಸ್ಟ್ 29, 2002

ಪ್ರಾಯೋಗಿಕವಾಗಿ ನಾಣ್ಯಗಳನ್ನು ವಿತರಿಸುವ ಕೆಲಸವನ್ನು ಕೈಗೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಏಜೆನ್ಸಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಾಣ್ಯಗಳ ವಿತರಣೆಯನ್ನು ಕೈಗೊಳ್ಳುವ ಏಜೆನ್ಸಿಗಳಿಗೆ ಸೇವಾ ಶುಲ್ಕವನ್ನು ಸಂದಾಯ ಮಾಡುವುದಾಗಿ ರಿಸರ್ವ್ ಬ್ಯಾಂಕ್ ತಿಳಿಸಿದೆ. ಅದರ ಕೌಂಟರ್‌ಗಳಿಂದ ಪಡೆದ ನಾಣ್ಯದ ಒಂದು ಚೀಲಕ್ಕೆ 250 ರೂ.ಗಳನ್ನು ರಿಸರ್ವ್ ಬ್ಯಾಂಕ್ ಸಂದಾಯ ಮಾಡುತ್ತದೆ. ಏಜೆನ್ಸಿಗಳು ಯಾವುದೇ ಶುಲ್ಕ/ದಲ್ಲಾಳಿ ಶುಲ್ಕವನ್ನು ಪಡೆಯದೇ ಅದರ ಮುಖಬೆಲೆಯಲ್ಲಿಯೇ ನಾಣ್ಯಗಳನ್ನು ಸಾರ್ವಜನಿಕರಿಗೆ ವಿತರಿಸಬೇಕು. 1, 2, 5ರೂ. ಹಾಗೂ 25 ಮತ್ತು 50 ಪೈಸೆ ಮೌಲ್ಯದ ನಾಣ್ಯಗಳು ಲಭ್ಯವಿರುತ್ತವೆ.

ಸಾರ್ವಜನಿಕ ವಲಯದ ಉದ್ದಿಮೆಗಳು, ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಖ್ಯಾತ ಮತ್ತು ರಾಷ್ಟ್ರೀಯ/ಪ್ರಾದೇಶಿಕ ಸಾಮಾಜಿಕ ಕಲ್ಯಾಣ ಸಂಘಟನೆಗಳು (ಸರ್ಕಾರದ ಅನುದಾನ ಪಡೆದವುಗಳಿಗೆ ಆದ್ಯತೆ) ಅವರ ಗ್ರಾಹಕರಿಗೆ/ಸಾರ್ವಜನಿಕರಿಗೆ ನಾಣ್ಯಗಳನ್ನು ವಿತರಿಸುವುದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕನ್ನು ಸಂಪರ್ಕಿಸಬಹುದು. ಆಯ್ದ ಏಜೆನ್ಸಿಗಳು ಕೆಲವು ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ರಿಸರ್ವ್ ಬ್ಯಾಂಕಿನ ಕೌಂಟರುಗಳಿಂದ ತುಂಬಿದ ನಾಣ್ಯಗಳ ಚೀಲಗಳನ್ನು ಪಡೆಯುವಾಗ ಅದರ ಪೂರ್ಣ ಮೌಲ್ಯವನ್ನು ಸಂದಾಯ ಮಾಡಬೇಕು ಎಂಬುದೂ ಷರತ್ತುಗಳಲ್ಲಿ ಸೇರಿದೆ. ಪ್ರತಿ ನಾಣ್ಯ ಚೀಲದ ಮೌಲ್ಯವೆಂದರೆ:

| | |
|---|---|
| 25 ಪೈಸೆ | 1250 ರೂ.ಗಳು |
| 50 ಪೈಸೆ | 2500 ರೂ.ಗಳು |
| 1 ರೂ. | 2500 ರೂ.ಗಳು |
| 2 ರೂ. | 5000 ರೂ.ಗಳು |
| 5 ರೂ. | 10000 ರೂ.ಗಳು |

ಏಜೆನ್ಸಿಗಳಿಗೆ ಪ್ರತಿ ತಿಂಗಳೂ ವಾಸ್ತವವಾಗಿ ಸಂಗ್ರಹಿಸಿದ ಕರೆನ್ಸಿಗೆ ಪ್ರತಿ ಚೀಲಕ್ಕೆ 250 ರೂ.ಗಳ ಸೇವಾ ಶುಲ್ಕವನ್ನು ರಿಸರ್ವ್ ಬ್ಯಾಂಕ್ ಸಂದಾಯ ಮಾಡುತ್ತದೆ. ಸಾಗಣೆ ಮತ್ತು ಭದ್ರತಾ ಏರ್ಪಾಟುಗಳಿಗೆ ತಗಲುವ ವೆಚ್ಚವನ್ನು ಏಜೆನ್ಸಿಗಳು ತಾವೇ ಭರಿಸಬೇಕು.

ರಿಸರ್ವ್ ಬ್ಯಾಂಕು, ಈ ಸೌಲಭ್ಯವನ್ನು ಪ್ರಾರಂಭದಲ್ಲಿ ಆರು ತಿಂಗಳ ಅವಧಿಗೆ ಆಯ್ಕೆಯ ಆಧಾರದ ಮೇಲೆ ನೀಡಲಾಗುತ್ತದೆ ಎಂದು ತಿಳಿಸಿದೆ. ಏಜೆನ್ಸಿಗಳನ್ನು, ಅವುಗಳ ಹಿಂದಿನ ಕಾರ್ಯ ನಿರ್ವಹಣೆಯನ್ನು ಆಧರಿಸಿ ಆಯ್ಕೆ ಮಾಡಲಾಗುತ್ತದೆ. ಸಾರ್ವಜನಿಕರಿಗೆ ನಾಣ್ಯಗಳನ್ನು ವಾಸ್ತವವಾಗಿ ವಿತರಿಸುವಲ್ಲಿ ಬ್ಯಾಂಕುಗಳ/ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಆಧರಿಸಿ, ಪ್ರಾರಂಭದ ಅವಧಿ ಮುಗಿದ ನಂತರ ಈ ಸೌಲಭ್ಯವನ್ನು ನವೀಕರಿಸಬಹುದು. ರಿಸರ್ವ್ ಬ್ಯಾಂಕು ಒಂದು ತಿಂಗಳ ಸೂಚನೆ ನೀಡಿ ಯಾವುದೇ ಸಮಯದಲ್ಲಿ ಸೌಲಭ್ಯವನ್ನು ರದ್ದುಪಡಿಸುವ ಹಕ್ಕು ಹೊಂದಿರುತ್ತದೆ. ಈ ಯೋಜನೆಯ ಎಲ್ಲ ಅಂಶಗಳ ಬಗ್ಗೆ, ಅದನ್ನು ಕೊನೆಗೊಳಿಸುವುದೂ ಸೇರಿದಂತೆ, ರಿಸರ್ವ್ ಬ್ಯಾಂಕಿನ ನಿರ್ಧಾರವೇ ಅಂತಿಮವಾಗಿರುತ್ತದೆ.

ಆಸಕ್ತ ಸಂಸ್ಥೆಗಳು, ಅಹಮದಾಬಾದ್, ಬೆಂಗಳೂರು, ಭೂಪಾಲ್, ಭುವನೇಶ್ವರ, ಚಂಡೀಘಡ, ಚೆನ್ನೈ, ಗೌಹಾತಿ, ಹೈದರಾಬಾದ್, ಜೈಪುರ್, ಜಮ್ಮು, ಕಾನ್‌ಪುರ್, ಕೊಲ್ಕತ್ತ, ನಾಗಪುರ, ನವದೆಹಲಿ, ಮುಂಬಯಿ, ನವಿಮುಂಬಯಿ (ಬೇಲಾಪುರ್), ಪಾಟ್ನಾ, ತಿರುವನಂತಪುರಂನ ಪ್ರಾದೇಶಿಕ ವ್ಯವಸ್ಥಾಪಕರನ್ನು ಅಥವಾ ಮುಖ್ಯ ಮಹಾವ್ಯವಸ್ಥಾಪಕರು, ಕರೆನ್ಸಿ ನಿರ್ವಹಣೆ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಕಚೇರಿ, ಮುಂಬಯಿ – 400 001 ಇವರನ್ನು ಸಂಪರ್ಕಿಸಬೇಕೆಂದು ರಿಸರ್ವ್ ಬ್ಯಾಂಕ್ ವಿನಂತಿಸಿದೆ.

ನಾಣ್ಯಗಳನ್ನು ಸಾರ್ವಜನಿಕರಿಗೆ ತಲುಪಿಸುವ ಒಂದು ಕ್ರಮವಾಗಿ, ಮಹಾರಾಷ್ಟ್ರ ಮತ್ತು ಗೋವಾಗಳಲ್ಲಿ ಅಂಚೆ ಕಚೇರಿಗಳ ಮೂಲಕ ನಾಣ್ಯಗಳನ್ನು ವಿತರಿಸಲು ರಿಸರ್ವ್ ಬ್ಯಾಂಕು ಮುಂಬಯಿಯ ಅಂಚೆ ಪ್ರಾಧಿಕಾರಿಗಳೊಡನೆ ಮತ್ತು ಹಿಮಾಚಲ ಪ್ರದೇಶದಲ್ಲಿ ಹಿಮಾಚಲ ಪ್ರದೇಶ ರಸ್ತೆ ಸಾರಿಗೆ ನಿಗಮದೊಡನೆ ಒಪ್ಪಂದ ಮಾಡಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/230